ಅಮರಯ್ಯಾ ಪತ್ರಿಮಠ, ಸುರಪುರ
ನೀರಿನ ಬಿಂಬಕ್ಕೂ, ಕನ್ನಡಿಯ ಬಿಂಬಕ್ಕೂ ವ್ಯತ್ಯಾಸವೇನು?



ನೀರಿನ ಬಿಂಬ ತಲೆಕೆಳಗು; ಕನ್ನಡಿಯದು ಎಡಬಲದ ಎಡವಟ್ಟು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
'ಊರು ಹೋಗು ಅನ್ನತ್ತೆ. ಕಾಡು ಬಾ ಅನ್ನತ್ತೆ' ಇದರ ಅರ್ಥ ತಿಳಿಸಿ?
ಸಮ್ಮರ್ ಹಾಲಿಡೇಸ್ ಬಂದಿದೆ. ಫಾರೆಸ್ಟ್ ರೆಸಾರ್ಟ್ ಬುಕ್ ಮಾಡು ಎಂದು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು
ದೇಶೋದ್ಧಾರಕ್ಕೆ ದುಡಿಯಬೇಕಾದ್ದು ಧರೆಮರೆಯ ಎರೆಹುಳದಂತೆಯೋ, ಎಲೆಮರೆಯ ಕೋರಿಹುಳದಂತೆಯೋ?
ಎರೆಹುಳುವಿನಂತೆಯೇ; ಕೋರಿಯು ಆಶ್ರಯವಿತ್ತ ಎಲೆಯನ್ನೇ ಕೊರೆಯುವುದು.

ಎಲ್ಐಸಿ ವಿಜೇಂದ್ರ, ಮೈಸೂರು
ಬೆಳಗ್ಗೆ ಪಾರ್ಕ್‌ಗಳಲ್ಲಿ ಗಂಡಸರಿಗಿಂತ ಹೆಂಗಸರೇ ಹೆಚ್ಚು ವಾಕ್ ಮಾಡುವ ಉದ್ದೇಶ?



ಡಾಗನ್ನು ವಾಕಿಸುವ ಗಂಡಸಿಗೆ ಪಾರ್ಕಿಗೆ ಎಂಟ್ರಿ ಇಲ್ಲವಾದ್ದರಿಂದ ಪಾರ್ಕಲ್ಲಿ ಸ್ತ್ರೀದರ್ಬಾರ್.

ಎಂ.ಎ. ಕುಮಾರ್, ಬೆಂಗಳೂರು
ಹುಡುಗಿಯರಿಗೆ ಪ್ಯಾಂಟ್ ಮತ್ತು ನಿಕ್ಕರ್ ಧರಿಸುವ ಪದ್ಧತಿ ಬಂದಿದ್ದು ಹೇಗೆ?
ದೊಡ್ಡ ಗಾತ್ರದ ಬಟ್ಟೆಗಳ ಡ್ರೈಕ್ಲೀನ್ ಖರ್ಚು ದುಬಾರಿಯಾದುದೇ ಕಾರಣವಂತೆ.

ಎಸ್.ಸಿ. ರಮೇಶ್, ಮೈಸೂರು
ಹನಿಟ್ರ್ಯಾಪ್, ಮೌಸ್‌ಟ್ರ್ಯಾಪ್, ವೈಲ್ಡ್ ಅನಿಮಲ್ ಟ್ರ್ಯಾಪ್‌ಗಳಲ್ಲಿ ಯಾವುದು ಹೆಚ್ಚು ಅಪಾಯಕರ?
ಹೆಗ್ಗಣದಂತೆ ಕೊಬ್ಬಿ ಮೃಗದಂತೆ ಆಡುವವನನ್ನು ಹಿಡಿಯುವ ಹನಿಟ್ರ್ಯಾಪ್ ತ್ರೀ ಇನ್ ಒನ್.

ಶ್ರೀನಿವಾಸ ಕೆ., ಬೆಂಗಳೂರು
ಈ ಸಿನಿಮಾ ಮಂದಿ ಇಂಗ್ಲಿಷೂ ಅಲ್ಲದ, ಕನ್ನಡವೂ ಅಲ್ಲದ ಭಾಷೆ ಮಾತಾಡುವುದೇಕೆ?
ಸ್ವಂತಿಕೆ ಇಲ್ಲದ ಬಡಪಾಯಿಗಳಿಗೆ ಸ್ಕ್ರಿಪ್ಟ್ ಇಲ್ಲದಿದ್ದರೆ ಮಾತು ಅಡ್ಡಾದಿಡ್ಡಿಯೇ.

ಅನಸೂಯಾ ಟಿ, ಕೇದಿಗೆಮನೆ
ಹೆತ್ತವರು ಮಕ್ಕಳನ್ನು ಸಂಸಾರವೆಂಬ ಘೋರ ಸಾಗರಕ್ಕೆ ಆದಷ್ಟು ಬೇಗ ದೂಡಲು ಉತ್ಸುಕರೇಕೆ?
ಘೋರ ದೂರವಾಗಿ ಸಂಸಾರ ಹೂಹಾರ ಆಗಲು ಸಮಯ ಬೇಕಲ್ಲ.

ಎನ್. ವೈದೇಹಿ, ಮೈಸೂರು
ನೀರಿಲ್ಲವೆಂಬ ಹಾಹಾಕಾರವಿದ್ದರೂ ಕೆರೆಗಳನ್ನು ಮುಚ್ಚಿ ನಿವೇಶನ ನಿರ್ಮಿಸುವರಿಗೆ ಏನೆನ್ನಬೇಕು?
ನರಕಾಭಿವೃದ್ಧಿ ಮಂಡಳಿ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಅರ್ಧಂಬರ್ಧ ಸುಟ್ಟ ಐನೂರರ ನೋಟನ್ನು ಬ್ಯಾಂಕಿಗಿತ್ತರೆ ಹೊಸ ನೋಟು ಸಿಗುತ್ತಾ?
ಅರ್ಧ ಕಪ್ಪುಹಣಕ್ಕೆ ಷೋಕಾಸ್ ನೋಟಿಸ್; ಜೊತೆಗೆ 250 ಸಿಕ್ಕೀತು.

ಎಚ್.ಕೆ. ವಿಜಯಕುಮಾರ್, ರಾಯಚೂರು
ಓದುಗರ ಪ್ರಶ್ನೆಗಳಿಗೆ ನಿಮ್ಮ ಬದಲು ಎಐ ತಂತ್ರಜ್ಞಾನ ಉತ್ತರಿಸುವಂತಾದರೆ ಏನು ಮಾಡುವಿರಿ?
ಆ ತಂತ್ರಜ್ಞಾನವು ನನ್ನಂತೆಯೇ ಉತ್ತರಿಸುವಂತೆ ಪ್ರೋಗ್ರಾಂ ಮಾಡುತ್ತೇನೆ.

ವಾಸಣ್ಣ, ಧಾರವಾಡ
ಸಂದೇಹ ದೇಹದೊಳಗೋ, ದೇಹ ಸಂದೇಹದೊಳಗೋ?
ಸತ್ತರೂ ಸಂದೇಹ ಉಳಿಯುವುದರಿಂದ ಸಂದೇಹದಲ್ಲೇ ದೇಹ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ರಾಜಕಾರಣಿಗಳಲ್ಲಿ ಬೋಳು ತಲೆಯವರು ಕಡಿಮೆ. ಯಾಕಿರಬಹುದು?
ಕ್ಷೌರಿಕರಲ್ಲೂ ಕಡಿಮೆಯೇ. ಇತರರನ್ನು ಬೋಳಿಸುವವರಿಗೆ ಸ್ವಯಂ ಬೋಳು ಅಪರೂಪ.


## ಬಹುಮಾನಿತ ಪ್ರಶ್ನೆ

ಜೀವಿ, ಗೊಂಡೇದಹಳ್ಳಿ
ಅಧಿಕಾರದಲ್ಲಿದ್ದಾಗ ದಬ್ಬಾಳಿಕೆ ನಡೆಸಿದವರು ನಿವೃತ್ತಿಯ ನಂತರ ಎಫ್‌ಬಿಯಲ್ಲಿ ಫ್ರೆಂಡ್ ರಿಕ್ವೆಸ್ಟ್ ಕಳಿಸಿದರಲ್ಲ?
ಬಾಸ್ ಎಂಬ ಮುಲಾಜಿನ ಮೇಲೆ ಹೆಚ್ಚು 'ಲೈಕ್' ಕೊಡುವಿರೆಂದು.

ಜಗದೀಶ ಬಿ. ಹೊಸೂರು, ಮೈಸೂರು
ಎಣ್ಣೆ ಸ್ನಾನಕ್ಕೂ, ಎಣ್ಣೆ ಪಾನಕ್ಕೂ ಏನು ವ್ಯತ್ಯಾಸ?
ಅದಕ್ಕೆ ಅಭ್ಯಂಜನ ಅಂತಾರೆ; ಇದಕ್ಕೆ ಅಭ್ಯಂತರ ಅಂತಾರೆ.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಎಲ್ಲಾ ಬರಹಗಳು ಅರ್ಥಗರ್ಭಿತವಾದರೆ ಹೆರಿಗೆಯಾಗುವುದು ಯಾವಾಗ?
'ಏನೂ ಅರ್ಥವಾಗಲ್ಲ' ಎಂದು ಅಬಾರ್ಷನ್ ಮಾಡಿಸದೆ ಅರಿತವರಿಂದ ಅರಿತಾಗ.

ಫಾಲನೇತ್ರ ಸಜ್ಜನ, ಶಿರಸಿ
ನಾಗರವನ್ನು ಆಭರಣ ಮಾಡಿಕೊಂಡ ಶಂಕರ ಚೇಳನ್ನು ಕಡೆಗಣಿಸಲು ಕಾರಣ?



ಶಂಕರನಲ್ಲಿ ವಿಷ ಧರಿಸುವ ಗುಣವಿದೆ; ಕುಟುಕುವ ಗುಣವಿಲ್ಲ.

ಬೀ. ನಾಗರಾಜು, ಬೆಂಗಳೂರು
ಹುಟ್ಟು ಸಾವುಗಳ ನಡುವಿನ ನಮ್ಮ ಜೀವನಶೈಲಿ ಹೇಗಿರಬೇಕು?
ಇತರರಿಗೆ ಹೊಟ್ಟೆ ಉರಿಯುವಂತೆ.

ಬಿ.ಆರ್. ಉಷಾ, ಅಮೆರಿಕ
ಜನ ಲೈಬ್ರರಿಗೆ ಬಂದು ಬರೀ ಪೇಪರ್ ಓದ್ತಾರಲ್ಲಾ?
ಬರೀ ಪೇಪರ್ ಓದಲ್ಲ; ಏನಾದರೂ ಪ್ರಿಂಟ್ ಆಗಿರತ್ತೆ.

ಮಲ್ಲಿಕಾರ್ಜುನ, ಸುರಧೇನುಪುರ
ಬದಲಾವಣೆ ಜಗದ ನಿಯಮ. ಆದರೆ ಪಕ್ಷಗಳ ಬದಲಾವಣೆ?
ಜಗ್ಗದವರ ನಿಯಮ.

**ರಾಮ್**